ರೂಪಾಯಿ ತೆರಿಗೆ ಅಂದರೆ ಜಾಸ್ತಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಗೋಧಿ ವಿಚಾರದಲ್ಲಿ ಎಲ್ಲರೂ ಪಕ್ಷಾತೀತವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಇದು ಎಲ್ಲಾ ಆಸ್ಪತ್ರೆಗಳಿಗೆ ಸರಬರಾಜು ಮಾಡತಕ್ಕದ್ದು. ಅನೇಕ ವಿಧದಲ್ಲಿ ಪ್ರತಿಯೊಬ್ಬ ಸಾಮಾನ್ಯ ಜನರು ಬಡವರಿಂದ ಹಿಡಿದು ಎಲ್ಲರೂ ಉಪಯೋಗಿಸತಕ್ಕ ವಸ್ತು ಇದು. ಅವತ್ತಿನಿಂದ ಒಂದೇ ಸಮನೆ ಮನವಿ ಕೊಡುತ್ತಿದ್ದಾರೆ. ಅವರು ಕೂಡ ಬಂದು ಮನವಿ ಕೊಟ್ಟಿದ್ದಾರೆ. ನಾವು ಕೂಡ ಹೇಳಿದ್ದೇವೆ. ಈ ಬಗ್ಗೆ ಸರ್ಕಾರ ಒಂದು ಒಳ್ಳೆಯ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದೆಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮಾನ್ಯ ಹಣಕಾಸಿನ ಸಚಿವರನ್ನು ಅವರು ಭೇಟಿ ಮಾಡಿದರು. ನಿಯೋಗದವರು ಒಂದಲ್ಲ ಹತ್ತು ಬಾರಿ ಭೇಟಿ ಮಾಡಿದರು. ನಾಳೆ ಎಲ್ಲಾ ಬೇಕರಿಗಳು ಮುಚ್ಚಿದರೆ ಆಸ್ಪತ್ರೆಗೆ ಬೇಕಾದ ಆಹಾರ ಸರಬರಾಜಾಗುವುದು ಕಷ್ಟವಾಗುತ್ತದೆ. ಆಸ್ಪತ್ರೆಗೆ ಆಹಾರ ಸರಬರಾಜಾಗಬೇಕಾದುದು ಬಹಳ ಪ್ರಾಮುಖ್ಯವಾದುದು. ಇದು ರೋಗಿಗಳಿಗೆ ಬೇಕಾಗಿರತಕ್ಕ ಆಹಾರ, ಸಕ್ಕರೆ ರೋಗದವರಿಗೆ ಬೇಕಾಗಿರತಕ್ಕದ್ದು. ಗೋಧಿಯಿಂದ ತಯಾರಾಗತಕ್ಕ ಯಾವ ಯಾವ ಪದಾರ್ಥಗಳಿವೆ, ತಿಂಡಿ ತಿನಿಸುಗಳಿವೆ ಇವುಗಳಿಗೆ ಬೇಕಾದ ಗೋಧಿ ದೊರೆಯದೆ ಇನ್ನು ಒಂದು ವಾರದಲ್ಲಿ ಎಲ್ಲಾ ಬೇಕರಿಗಳನ್ನು ಮುಚ್ಚತಕ್ಕ ವ್ಯವಸ್ಥೆಗೆ ಹೊರಟಿದ್ದಾರೆ. ಸರ್ಕಾರ ಈ ದಿಸೆಯಲ್ಲಿ ಎಚ್ಚರಿಕೆ ವಹಿಸದಿದ್ದರೆ ಅತ್ಯಂತ ದೊಡ್ಡ ದುರಂತವಾಗುತ್ತದೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಈ) ಉತ್ತರ ಕರ್ನಾಟಕ ಭಾಗಗಳಲ್ಲಿ ಹತ್ತಿ ವ್ಯಾಪಾರ ಸ್ಥಗಿತಗೊಂಡಿರುವುದು.

ಶ್ರೀ ಚಂದ್ರಶೇಖರ ಎಂ. ಮಾಮನಿ (ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಕಳೆದ 21 ದಿನಗಳಿಂದ ಉತ್ತರ ಕರ್ನಾಟಕದಲ್ಲಿ ಹತ್ತಿ ಬೆಳೆಯತಕ್ಕ ಪ್ರದೇಶದಲ್ಲಿ ರೈತರು ತಂದಂಥ ಮಾಲು ವ್ಯಾಪಾರವಾಗುತ್ತಿಲ್ಲ. 21 ದಿನಗಳಿಂದ ಮಾರುಕಟ್ಟೆಯಲ್ಲಿ ವ್ಯಾಪಾರ ಸ್ಥಗಿತವಾಗಿದೆ. ಮೊದಲಿಗೆ ಲಾಸ್ಟ್ ಪಾಯಿಂಟ್‌ನಲ್ಲಿ ಏನು ಟ್ಯಾಕ್ಸ್ ಹಾಕುತ್ತಿದ್ದರು ಅದನ್ನು ಈಗ ಫಸ್ಟ್ ಪಾಯಿಂಟ್‌ನಲ್ಲಿ ಹಾಕಿದ್ದರಿಂದ ಹತ್ತಿಗೆ ಒಂದು ಟ್ಯಾಕ್ಸ್ ಕೊಡಬೇಕು, ಎಣ್ಣೆಗೆ ಒಂದು ಟ್ಯಾಕ್ಸ್ ಕೊಡಬೇಕು, ಹತ್ತಿ ಕಾಳಿಗೆ ಒಂದು ಟ್ಯಾಕ್ಸ್ ಕೊಡಬೇಕು, ಹಿಂಡಿಗೆ ಒಂದು ಟ್ಯಾಕ್ಸ್ ಕೊಡಬೇಕು. ಹೀಗೆ 4 ಸಾರಿ ಟ್ಯಾಕ್ಸ್ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಇದು ಕನ್ಸ್ಯೂಮರ್ಸ್‌ಗೆ ಬಹಳ ಭಾರವಾಗುತ್ತದೆ. ಮೊದಲು ಯಾವ ರೀತಿ ಇತ್ತು ಎಂದರೆ, ಲಾಸ್ಟ್ ಪಾಯಿಂಟ್‌ಗೆ ಟ್ಯಾಕ್ಸ್ ಮಾಡಬೇಕಾಗಿತ್ತು. ಮೊನ್ನೆ ದಿವಸ ಕರ್ನಾಟಕದಲ್ಲಿದ್ದಂಥ ಹತ್ತಿ ಬೆಳೆಯತಕ್ಕ ಎಲ್ಲಾ ಮಾರುಕಟ್ಟೆಯ ವ್ಯಾಪಾರಸ್ಥರು ಬಂದು ಮಾನ್ಯ ಮುಖ್ಯಮಂತ್ರಿಗಳನ್ನು, ಮಾನ್ಯ ಆರ್ಥಿಕ ಮಂತ್ರಿಗಳನ್ನು ಭೇಟಿಯಾಗಿ

ಹೋಗಿದ್ದಾರೆ. ತಾವು ದಯಮಾಡಿ ಸರ್ಕಾರದಲ್ಲಿ ಯೋಗ್ಯ ನಿರ್ಣಯ ತೆಗೆದುಕೊಂಡು ಮೊದಲಿನ ಪ್ರಕಾರ ಲಾಸ್ಟ್ ಪಾಯಿಂಟ್‌ಗೆ ಟ್ಯಾಕ್ಸ್ ಹಾಕತಕ್ಕ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಶ್ರೀ ಜಗದೀಶ್ ಅವರು ಹೇಳಿದ್ದಾರೆ, ನಿಮ್ಮ ನಾಯಕರು ಹೇಳಿದ್ದಾರೆ. ಸಮಯ ವ್ಯರ್ಥವಾಗುತ್ತದೆಂದು ಅಷ್ಟೆ ಹೇಳುತ್ತಿದ್ದೇನೆ. ಶೂನ್ಯ ವೇಳೆಯ ಮಹತ್ವ ಗೊತ್ತಿದ್ದರೆ ಅನುಕೂಲವಾಗುತ್ತದೆ. ಶೂನ್ಯವೇಳೆ ಎಂದು ಏತಕ್ಕೆ ಹೇಳುತ್ತೇವೆಂದರೆ ಹಿಂದಿನ ದಿವಸ ಸದನ ನಡೆದಿರುತ್ತದಲ್ಲಾ, ಸದನ ನಡೆದು ಅಡ್ಜರ್ನ್ ಆಗಿರುತ್ತದೆ ಮಾರನೇ ದಿನಕ್ಕೆ, ಮಾರನೇ ದಿವಸ ಸದನ ಸೇರುವ ವೇಳೆಗೆ ಯಾವುದಾದರೂ ಒಂದು ಘಟನೆ ನಡೆದು ಅದು ಬಹಳ ಪ್ರಾಮುಖ್ಯವಾಗಿದ್ದು ಮೊದಲೇ ನೋಟೀಸ್ ಕೊಡುವುದಕ್ಕೆ ಆಗದಿದ್ದರೆ ಅಂಥ ಬಹಳ ಪ್ರಮುಖ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಶೂನ್ಯ ಇರುವುದು. ಇನ್ನೂ ಸ್ವಲ್ಪ ನಿಮಗೆಲ್ಲಾ ಅವಕಾಶ ಮಾಡಿಕೊಡುವುದಕ್ಕೆ ಅದನ್ನು ಇಟ್ಟುಕೊಂಡಿದ್ದೇವೆ. ಇಂಥ ಸಂದರ್ಭದಲ್ಲಿ 4-5 ಜನ ಒಂದೇ ವಿಚಾರವನ್ನು ಪ್ರಸ್ತಾಪ ಮಾಡಿ ಏನು ಮಾಡುತ್ತೀರಿ?

ಊ) ಗೋಧಿಹಿಟ್ಟಿನ ಮೇಲೆ ವಿಧಿಸಿರುವ ಕರವನ್ನು ರದ್ದುಗೊಳಿಸುವ ಬಗ್ಗೆ.

ಶ್ರೀ ಎಲ್.ಕೆ.ಚವಾಣ್ (ಹುಲಸೂರ್): ಮಾನ್ಯ ಅಧ್ಯಕ್ಷರೆ, ಬಡವರ, ಶ್ರೀಮಾನ್ಯರ ನಿತ್ಯ ಆಹಾರವಾದ ಗೋಧಿಯ ಮೇಲೆ ಶೇಕಡ 2ರಷ್ಟು ಮಾರಾಟ ಕರ ಶೇಕಡ 3ರಷ್ಟು ಸಿ.ಒ.ಟಿ. ಹಾಕುವುದರಿಂದ ಬಡವರ ಹೊಟ್ಟೆಯ ಮೇಲೆ ಬರೆ ಹಾಕಿದಂತಾಗಿದೆ. ಆದುದರಿಂದ ಈ ಮಾರಾಟ ಕರ ಹಾಗೂ ಸಿ.ಒ.ಟಿ. ಈ ಎರಡನ್ನು ಹಾಕುವುದರಿಂದ ಉತ್ತರ ಕರ್ನಾಟಕದಲ್ಲಿ ಕಳೆದ 15 ದಿನಗಳಿಂದ ಮಿಲ್ಲುಗಳು ಅಲ್ಲದೆ ಬ್ರೆಡ್ ಬೇಕರಿಗಳು, ಹೋಟೆಲ್ ವ್ಯಾಪಾರಸ್ಥರು ಸಂಪೂರ್ಣವಾಗಿ ಅಂಗಡಿಗಳನ್ನು ಬಂದ್ ಮಾಡಿ ಹೋರಾಟ ಮಾಡುತ್ತಿದ್ದಾರೆ. ಇದರಿಂದ ಶ್ರೀಸಾಮಾನ್ಯ ಹಾಗು ಬಡವರಿಗೆ, ನಮ್ಮ ಭಾಗದ ಜನರಿಗೆ ಗೋಧಿ ಹಿಟ್ಟನ್ನು ತಿನ್ನುವಂತ, ಚಪಾತಿ ತಿನ್ನುವಂಥ ಜನರಿಗೆ ಅನ್ಯಾಯವಾಗಿದೆ. ಆದುದರಿಂದ ಇದರ ಮೇಲೆ ಹಾಕಿದಂಥ ಮಾರಾಟ ತೆರಿಗೆಯನ್ನು ಸರ್ಕಾರ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹತ್ತಿ ಮತ್ತು ಶೇಂಗಾ ಇದರ ಮೇಲೆ ತಾವು ಮೊದಲ ಹಂತದಲ್ಲಿ ಏನು ತೆರಿಗೆ ಹಾಕಿದ್ದೀರಿ ಇದನ್ನು ರದ್ದು ಮಾಡಿ, ಮೊದಲು ಕೊನೆಯ ಹಂತದಲ್ಲಿ ಹಾಕತಕ್ಕ ಪದ್ಧತಿ ಏನಿತ್ತು ಆ ರೀತಿ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಈ ರೀತಿ ಮಾರುಕಟ್ಟೆ ಬಂದ್ ಆಗುವುದಾಗಲಿ, ವ್ಯವಹಾರ ಸ್ಥಗಿತಗೊಳ್ಳುವುದಾಗಲಿ ಯಾರೂ ಸಂತೋಷಪಡುವ ವಿಚಾರ ಅಲ್ಲ. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಗಮನ ಕೊಟ್ಟಿದೆ. ಈ ವಿಚಾರ ಆಯವ್ಯಯದಲ್ಲಿ ಪೂರಕ ಬೇಡಿಕೆಗಳು ಬರತಕ್ಕ ಸಂದರ್ಭದಲ್ಲಿ